**ದಿನಾಂಕಃ 08-08-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಎ ಕೆ ವಕೀಲರಿಂದಃ**

1. ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ರೀಯಲ್ ಎಸ್ಟೇಟ್ ಬಿಸ್ನೂನೇಸ್ ಮಾಡುತ್ತೇನೆ. ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ಹಾಗೂ ದೂರಿನಲ್ಲಿ ನಾನು ರೀಯಲ್ ಎಸ್ಟೇಟ್ ಬಿಜಿನೆಸ್ ಮಾಡುತ್ತೇನೆ ಅಂತಾ ಬರೆಸಿಲ್ಲ. ತಿಳುವಳ್ಳಿ ಗ್ರಾಮದಲ್ಲಿ ನನಗೆ ಯಾವುದೇ ಬಿಜಿನೆಸ್ ಇಲ್ಲ. ಆರೋಪಿ ಹಾವೇರಿ ಮತ್ತು ರಾಣೆೇಬೆನ್ನೂರಿಗೆ ಬಂದು ಹೋಗಿ ಮಾಡುತ್ತಾರೆ, ಸ್ನೇಹಿತರಿಂದ ನನಗೆ ಪರಿಚಯ ಆಗಿರುತ್ತಾರೆ. ಆರೋಪಿ ನನಗೆ ಸುಮಾರು 5-6 ವರ್ಷಗಳಿಂದ ಪರಿಚಯ ಇರುತ್ತಾರೆ. ಆರೋಪಿಗೆ ರಾಣೇಬೆನ್ನೂರಿನಲ್ಲಿ ಬಿಜಿನಸ್ ಅಥವಾ ಆಸ್ತಿ ಇದ್ದ ಬಗ್ಗೆ ಗೊತ್ತಾ ಎಂದರೆ ಸಾಕ್ಷಿ ಗೊತ್ತಿಲ್ಲ ಅಂತಾ ನುಡಿಯುತ್ತಾರೆ. ಆರೋಪಿಗೆ ಹಾವೇರಿಯಲ್ಲಿ ಬಿಜಿನಸ್ ಅಥವಾ ಆಸ್ತಿ ಇದ್ದ ಬಗ್ಗೆ ಗೊತ್ತಾ ಎಂದರೆ ಸಾಕ್ಷಿ ಆಸ್ತಿ ಇರಬಹುದು ಅದರೆ ನನಗೆ ಗೊತ್ತಿಲ್ಲ ಅಂತಾ ನುಡಿಯುತ್ತಾರೆ.

2. ನನ್ನ ದೂರಿನ ಪ್ಯಾರಾ ನಂಬರ್ 7 ರಲ್ಲಿ ಹೇಳಿರುವಂತೆ ಆರೋಪಿ ನನ್ನಿಂದ ಆಗಾಗ್ಗ 3-4 ಸಾರಿ ಹಣ ಪಡೆದು ವಾಪಸ್ಸು ಕೊಟ್ಟಿದ್ದರು. 2-3 ವರ್ಷಗಳ ಹಿಂದೆ ಅಂದರೆ 2018 ರಲ್ಲಿ ಈ ರೀತಿ ಹಣ ಪಡೆದು ವಾಪಸ್ಸು ಕೊಟ್ಟಿದ್ದರು. ಆರೋಪಿ ಈ ಹಿಂದೆ 50,000/- ಹಣ ಪಡೆದು ವಾಪಸ್ಸು ಕೊಟ್ಟಿದ್ದರು. ಈ ಹಿಂದೆ 50,000/- ರೂ ಆರೋಪಿಗೆ ಕೊಟ್ಟು ವಾಪಸ್ಸು ಪಡೆದು ಬಗ್ಗೆ ನನಗೆ ದಾಖಲಾತಿಗಳು ಇಲ್ಲ. ಆರೋಪಿಯೊಂದಿಗೆ ನಾನು ವ್ಯವಹಾರ ಮಾಡಿಲ್ಲ ಮತ್ತು ಆರೋಪಿ ನನಗೆ ಪರಿಚಯ ಇಲ್ಲದೆ ಇರುವುದರಿಂದ ನನ್ನ ಬಳಿ ದಾಖಲಾತಿಗಳು ಇಲ್ಲ

ಎಂದರೆ ಸರಿಯಲ್ಲ. ಆರೋಪಿ ಯಾವತ್ತೂ ನನ್ನೊಂದಿಗೆ ವ್ಯವಹಾರ ಮಾಡಿಲ್ಲ ಎಂದರೆ ಸರಿಯಲ್ಲ.

3. ದಿನಾಂಕ 12-03-2021 ರಂದು ನಿಮ್ಮ ಬಳಿ 5 ಲಕ್ಷ ಹಣ ಇತ್ತು ಅಂತಾ ತೋರಿಸಲು ಯಾವುದಾದರೂ ದಾಖಲಾತಿಗಳು ಇವೆಯೋ ಎಂದರೆ ಸಾಕ್ಷಿ ಸೈಟ್ ಮಾರಿದ ಬಗ್ಗೆ ಸಂಚಕಾರು ಪತ್ರ ಇದೆ ಎಂದು ನುಡಿಯುತ್ತಾರೆ. ಸೈಟ್ ನಂಬರ್ ಎಂದರೆ ರಾಣೇಬೆನ್ನೂರಿನ ಸರ್ವೆ ನಂಬರ್ 791/ಕ, ಪ್ಲಾಟ್ ನಂಬರ್ 3. ಸದರಿ ಪ್ಲಾಟ್ ನನ್ನದೇ ಅದನ್ನು ನಾನು ಶಶಿಧರ್ ನಾಯ್ಕ ಎನ್ನುವವರಿಗೆ ಸಂಚಕಾರ ಪತ್ರ ಮಾಡಿ ಕೊಟ್ಟಿದ್ದೇನೆ. ಸಂಚಕಾರು ಪತ್ರವು ಡಿಸೆಂಬರ್ -2020 ರಲ್ಲಿ ಸಂಚಕಾರ ಹಣವನ್ನು ನನಗೆ ಮುಂದೆ ಮಾರ್ಚ್ತಿಂಗಳಿನಲ್ಲಿ ಕೊಟ್ಟಿದ್ದರು. ಸೈಟ್ ಮಾರಾಟವು 26 ಲಕ್ಷ ಚಿಲ್ಲರೆ ಹಣಕ್ಕೆ ಆಗಿತ್ತು. ಸೈಟ್ ನ್ನು ಇಂಥವರಿಗೆ, ಇಷ್ಟು ಹಣಕ್ಕೆ ಮಾರಿದ್ದೆ ಎನ್ನುವ ವಿಷಯವನ್ನು ದೂರಿನಲ್ಲಿ ಬರೆಸಿಲ್ಲ ಎಂದರೆ ಸರಿ.

4. 2021 ಫೆಬ್ರವರಿ ತಿಂಗಳಿನಲ್ಲಿ ಹಾವೇರಿಯಲ್ಲಿ ಬೇಟಿಯಾದಾಗ ತನಗೆ ಹಣದ ಅವಶ್ಯಕತೆ ಇದೆ ಕೊಡಿರಿ ಅಂತಾ ಕೇಳಿದರು. ನಾನು 2021 ಮಾರ್ಚ್ ತಿಂಗಳಿನಲ್ಲಿ ರಾಣೇಬೆನ್ನೂರಿನ ನಮ್ಮ ಮನೆಯಲ್ಲಿ ಹಣ ಕೊಟ್ಟಿರುತ್ತೇನೆ. ಈ ವಿಷಯವನ್ನು ನನ್ನ ದೂರಿನಲ್ಲಿ ಹೇಳಿಲ್ಲ ಎಂದರೆ ಸರಿ. ನಾನು ಆರೋಪಿಗೆ ಹಣ ಕೊಟ್ಟಾಗ ನಮ್ಮಿಬ್ಬರು ಇದ್ದೇವು, ಬೇರೆ ಯಾರು ಇರಲಿಲ್ಲ. ಆರೋಪಿಗೆ 5 ಲಕ್ಷ ಹಣವನ್ನು ಸಂದಾಯ ಆದ ಬಗ್ಗೆ ಆತನಿಂದ ಯಾವುದೇ ರಶೀದಿಯನ್ನು ಬರೆಸಿಕೊಂಡಿಲ್ಲ, ಅದರೆ ಆರೋಪಿ ನನಗೆ ಚೆಕ್ಕು ಕೊಟ್ಟಿರುತ್ತಾನೆ. ಆರೋಪಿ ನನಗೆ ಚೆಕ್ಕು ಕೊಟ್ಟಿರುತಾನೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನಗೆ ನಿಪಿ-1

ನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ನಾನು ಹಣ ಕೊಟ್ಟ ದಿನವೇ ಅದರೆ 12-03-2021 ರಂದು ಆರೋಪಿ ನನಗೆ ಚೆಕ್ಕು ಕೊಟ್ಟಿರುತ್ತಾನೆ.

5. ನಿಪಿ-1 ರ ಮೇಲೆ ನನ್ನ ಹೆಸರಿನ ಬರವಣಿಗೆ ಮತ್ತು ದಿನಾಂಕವನ್ನು ನಾನು ಬರೆದಿದ್ದು ಉಳಿದ ಬರವಣಿಗೆಯನ್ನು ಆರೋಪಿ ಮಾಡಿ ಕೊನೆಗೆ ಸಹಿ ಮಾಡಿ ಕೊಟ್ಟಿರುತ್ತಾನೆ. ನಿಪಿ-1 ರ ಮೇಲೆ ಇರುವ 5 ಲಕ್ಷ ಹಣದ ಅಂಕಿ ಮತ್ತು ಅಕ್ಷರದ ಬರವಣಿಗೆ ಇಂಕಿಗೂ, ಸಹಿಯ ಇಂಕಿಗೂ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ನಿಪಿ-1 (ಎ)ಸಹಿಯನ್ನು ಹೊರತು ಪಡಿಸಿ ಉಳಿದ ಬರವಣಿಗೆಯನ್ನು ಆರೋಪಿ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿ ನಿಪಿ-1 ರ ಮೇಲೆ ನನ್ನ ಹೆಸರಿನ ಬರವಣಿಗೆ ಮತ್ತು ದಿನಾಂಕವನ್ನು ಬರೆದುಕೊಳ್ಳಿ ಅಂತಾ ಹೇಳಿದರು. ಈ ರೀತಿ ಹೆಸರು ಬರೆದುಕೊಳ್ಳಲು ಆರೋಪಿ ನನಗೆ ಅಧಿಕಾರವನ್ನು ಕೊಟ್ಟಿದ್ದರು ಅಂತಾ ದೂರಿನಲ್ಲಿ ಬರೆಸಿದ್ದರು ಎಂದರೆ ಸರಿಯಲ್ಲ.

6. ನಾನು ತಿಳುವಳ್ಳಿ ಗ್ರಾಮಕ್ಕೆ ಹೋಗಿಲ್ಲ. ಆರೋಪಿಯೇ ತನ್ನ ವಿಳಾಸವನ್ನು ಹೇಳಿದರು. ನಾನು ನೋಟಿಸ್ ನಲ್ಲಿ ಕಾಣಿಸಿದ ವಿಳಾಸ ಆರೋಪಿಯದಲ್ಲ ಎಂದರೆ ಸರಿಯಲ್ಲ. ಹೆಚ್ ಎಸ್ ಕ್ಯೂ ಟ್ರೇಡರ್ಸ ಎನ್ನುವುದು ಆರೋಪಿಯ ಅಂಗಡಿಯ ಹೆಸರು ಎಂದರೆ ಸರಿ. ಆರೋಪಿಯ ಈ ಅಂಗಡಿಯು 249/12,ಹಾನಗಲ್ ರೋಡ್ ತಿಳುವಳ್ಳಿ ಯಲ್ಲಿ ಬರುತ್ತದೆ ಎಂದರೆ ಸಾಕ್ಷಿ ಈ ಅಂಗಡಿಯು ಶಬರಿ ಡಾಬಾ, ಪೆಟ್ರೋಲ್ ಬಂಕ್ ಹತ್ತಿರ ತಿಳುವಳ್ಳಿಯಲ್ಲಿ ಬರುತ್ತದೆ ಅಂತಾ ಹೇಳಿರುತ್ತಾರೆ ಅಂತಾ ನುಡಿಯುತ್ತಾರೆ. ನಾನು ನೋಟಿಸ್ ನಲ್ಲಿ ಕಾಣಿಸಿದ ವಿಳಾಸ ಆರೋಪಿ ಅಂಗಡಿಯ ರಿಜಿಸ್ಟ್ರೇಷನ್ ನಲ್ಲಿ ಇಲ್ಲ ಎಂದರೆ ಸಾಕ್ಷಿ ಆರೋಪಿ ಪರ ವಕೀಲರು ತೋರಿಸಿದ ರಜಿಸ್ಟ್ರೇಷನ್ ಸರ್ಟಿಫಿಕೇಟ್ ನ ಜೆರಾಕ್ಸ ಪ್ರತಿಯನ್ನು ಪರಿಶೀಲನೆ ಮಾಡಿ ನೋಡಿ ಆ

ವಿಳಾಸ ಇಲ್ಲ ಅಂತಾ ನುಡಿಯುತ್ತಾರೆ. ನಿಪಿ–5 ರಲ್ಲಿರುವ ಸಹಿ ಆರೋಪಿಯದಲ್ಲ ಎಂದರೆ ಸಾಕ್ಷಿ ಅದನ್ನು ನಾನು ನೋಡಿಲ್ಲ ಹೀಗಾಗಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಅಂತಾ ನುಡಿಯುತ್ತಾರೆ. ಉದ್ದೇಶಪೂರ್ವಕವಾಗಿ ನಾನು ಆರೋಪಿಯ ತಪ್ಪು ವಿಳಾಸಕ್ಕೆ ನೋಟಿಸ್ ಕಳುಹಿಸಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲನ್ನು ಮುಂದೂಡಲಾಯಿತು .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ/-

3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.